29

PR-763

## ಕರ್ನಾಟಕ ಸರ್ಕಾರದ ನಡವಳಿಗಳು
## (ಜಲಸಂಪನ್ಮೂಲ ಸಚಿವಾಲಯ)

ವಿಷಯ : ಲೋಕೋಪಯೋಗಿ ಇಲಾಖೆಯಿಂದ ಶಾಶ್ವತವಾಗಿ ವರ್ಗಾವಣೆ ಹೊಂದಿರುವ ಅಧಿಕಾರಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳಿಸುವ ಬಗ್ಗೆ- ಆದೇಶ.

ಓದಲಾಗಿದೆ :
1. ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಜಸಂಇ 293 ಸೇಸಕಿ 2005 ದಿನಾಂಕ: 03.12.2014.
2. ಸರ್ಕಾರದ ಆದೇಶ ಸಂಖ್ಯೆ ಜಸಂಇ 06 ಸೇಎಸು 2015, ದಿನಾಂಕ: 25.11.2019.
3. ಸರ್ಕಾರದ ಅಧಿಸೂಚನೆ ಸಂಖ್ಯೆ ಜಸಂಇ 06 ಸೇಎಸು 2015, ದಿನಾಂಕ: 25.11.2019.
4. ಸರ್ಕಾರದ ಆದೇಶ ಸಂಖ್ಯೆ ಲೋಇ 216 ಸೇಸಕಿ 2018, ದಿನಾಂಕ: 19.05.2020.
5. ಸರ್ಕಾರದ ಅಧಿಸೂಚನೆ ಸಂಖ್ಯೆ ಜಸಂಇ 06 ಸೇಎಸು 2015, ದಿನಾಂಕ: 13.08.2020.
6. ಸರ್ಕಾರದ ಆದೇಶ ಸಂಖ್ಯೆ ಜಸಂಇ 06 ಸೇಎಸು 2015 (ಭಾಗ-5) ದಿನಾಂಕ: 30-01-2021
7. ಸರ್ಕಾರದ ಆದೇಶ ಸಂಖ್ಯೆ ಜಸಂಇ 06 ಸೇಎಸು 2015 (ಭಾಗ-6) ದಿನಾಂಕ 02-03-2021
8. ಸರ್ಕಾರದ ಆದೇಶ ಸಂಖ್ಯೆ ಜಸಂಇ 06 ಸೇಎಸು 2015 (ಭಾಗ-7) ದಿನಾಂಕ: 16-03-2021
9. ಅನಧಿಕೃತ ಟಿಪ್ಪಣಿ ಸಂಖ್ಯೆ ಜಸಂಇ 06 ಸೇಎಸು 2015 (ಭಾಗ-6), ದಿ: 22-01-2021
10. ಅಧಿಸೂಚನೆ ಸಂಖ್ಯೆ ಲೋಇ 175 ಎಸ್ಎಸ್‌ಕೆ 2021, ದಿನಾಂಕ: 26-07-2021.
11. ಅಧಿಸೂಚನೆ ಸಂಖ್ಯೆ ಲೋಇ 38 ಎಸ್ಎಸ್‌ಕೆ 2021, ದಿನಾಂಕ: 28-07-2021.

********

**ಪ್ರಸ್ತಾವನೆ:**

1. ಮೇಲೆ (1)ರಲ್ಲಿ ಓದಲಾದ ದಿನಾಂಕ: 03.12.2014ರಲ್ಲಿ ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ್ದು, ಅದರನ್ವಯ ವಿವಿಧ ವೃಂದದ ಅಧಿಕಾರಿ/ ನೌಕರರ ಮಂಜೂರಾತಿ ಹುದ್ದೆಗಳಿಗೆ ಅನುಸಾರವಾಗಿ ನಿಯಮ 2 ರಲ್ಲಿ ಅವಕಾಶ ಕಲ್ಪಿಸಿದಂತೆ ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ನೇಮಿಸಿಕೊಳ್ಳಲು ಅಭಿಮತ ನೀಡುವ ಬಗ್ಗೆ ಅವಕಾಶ ಕಲ್ಪಿಸಿ, ಮೇಲೆ (2)ರಲ್ಲಿ ಓದಲಾದ ದಿನಾಂಕ: 25.11.2019ರಲ್ಲಿ ಅದರಂತೆ ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿತ್ತು. ಸದರಿ ಕಾರ್ಯಕಾರಿ ಆದೇಶವನ್ನು ದಿನಾಂಕ: 27.11.2019ರ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

2. ಮೇಲೆ (3)ರಲ್ಲಿ ಓದಲಾದ ದಿನಾಂಕ: 25.11.2019ರ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತ ವರ್ಗಾವಣೆ ಮುಖೇನ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ, ಈ ಕುರಿತು ಅಧಿಕಾರಿ / ನೌಕರರು ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಸದರಿ ಅಧಿಸೂಚನೆಯ ಅನುಬಂಧದಲ್ಲಿ ವಿವರಿಸಲಾಗಿತ್ತು. ಸದರಿ ಅಧಿಸೂಚನೆಯನ್ನು ದಿನಾಂಕ: 27.11.2019ರ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

3. ಮೇಲೆ (4)ರಲ್ಲಿ ಓದಲಾದ ದಿನಾಂಕ: 19.05.2020ರ ಆದೇಶದಲ್ಲಿ, ಲೋಕೋಪಯೋಗಿ ಇಲಾಖೆಯೂ ಸಹ ಜಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸೇವೆಯಲ್ಲಿ ವಿಲೀನ ಹೊಂದಲು ಇಚ್ಛಿಸಿರುವ ಅಧಿಕಾರಿ / ನೌಕರರುಗಳು ಅಭಿಮತ ಸಲ್ಲಿಸಲು ಅವಕಾಶ ಕಲ್ಪಿಸಿತ್ತು.

4. ಮೇಲೆ (5)ರಲ್ಲಿ ಓದಲಾದ ದಿನಾಂಕ: 13.08.2020ರ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ಆನ್‌ಲೈನ್ ಮುಖಾಂತರ ಅಭಿಮತವನ್ನು ಸಲ್ಲಿಸಿರುವ ವಿವಿಧ ವೃಂದದ ಅಧಿಕಾರಿ/ನೌಕರರ ವಿವರವಿರುವ ವೃಂದವಾರು ತಾತ್ಕಾಲಿಕ ಪಟ್ಟಿಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು:

**ಷರತ್ತುಗಳು:**

***i) ಅಧಿಕಾರಿ/ನೌಕರರು, ಅವರ ಹೆಸರು, ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಮತ್ತು ನಿಯಮಾನುಸಾರ ಇತರೆ ವ್ಯತ್ಯಾಸಗಳಿದ್ದಲ್ಲಿ ಸಂಬಂಧಪಟ್ಟ ದಾಖಲೆಯೊಂದಿಗೆ ನಿಗಧಿ ಪಡಿಸಿರುವ ನಮೂನೆಯಲ್ಲಿ ಈಗಾಗಲೇ ಜಲಸಂಪನ್ಮೂಲ ಇಲಾಖೆಯು ಪ್ರಕಟಿಸಿರುವ ಜಾಲತಾಣದಲ್ಲಿ 15 (ಹದಿನೈದು) ದಿನಗಳ ಒಳಗಾಗಿ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸತಕ್ಕದ್ದು. ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.***

***ii) ಅಭಿಮತ ಸಲ್ಲಿಸಿರುವ ಅಧಿಕಾರಿ/ನೌಕರರ ಹೆಸರು, ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಮತ್ತು ನಿಯಮಾನುಸಾರ ಇತರೆ ವ್ಯತ್ಯಾಸಗಳಿದ್ದಲ್ಲಿ ಸಂಬಂಧಪಟ್ಟ ಪೂರಕ ದಾಖಲೆಯನ್ನು ಸ್ಕ್ಯಾನ್ ಮಾಡಿ ಈ ಪಟ್ಟಿಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಜಾಲತಾಣದಲ್ಲಿ 15 (ಹದಿನೈದು) ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು.***

***iii) ಸದರಿ ಅಧಿಸೂಚನೆಯು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಸಲ್ಲಿಸಿರುವ ಅರ್ಜಿ ಸಂಖ್ಯೆ: 7620-7653/2019 ಶ್ರೀ ಡಿ. ಮೂರ್ತಿ ಮತ್ತು ಇತರರು ಹಾಗೂ ಅರ್ಜಿ ಸಂಖ್ಯೆ: 7493-7502/2019 ರಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.***

***iv) ಅನುಬಂಧದಲ್ಲಿ ಪ್ರಕಟಿಸಿರುವ ವಿವಿಧ ವೃಂದದ ಅಧಿಕಾರಿ/ನೌಕರರ ಜೇಷ್ಠತೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆ/ ಜಲಸಂಪನ್ಮೂಲ ಇಲಾಖೆ/ ಇತರೆ ಇಲಾಖೆಗಳಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ವಯ ಅವರುಗಳ ಅಂತರ್ ಜೇಷ್ಠತೆಯ(Inter-se) ಅನುಸಾರ ಅಂತಿಮ ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು.***

5. ಮೇಲೆ (6) ರಿಂದ (8) ರಲ್ಲಿ ಓದಲಾದ ದಿನಾಂಕ: 30-1-2021, 2-3-2021 ಮತ್ತು 16-03-2021 ರ ಆದೇಶಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಶಾಶ್ವತವಾಗಿ ವರ್ಗಾವಣೆ ಹೊಂದಿರುವ ವಿವಿಧ ವೃಂದದ ಅಭಿಯಂತರರುಗಳ ಸೇವೆಯನ್ನು ಜಲ ಸಂಪನ್ಮೂಲ ಇಲಾಖೆಯಲ್ಲಿ The Karnataka Water Resources Services (Recruitment) Rules 2014ರನ್ವಯ ಹಾಗೂ ಕರ್ನಾಟಕ ನಾಗರಿಕ ಸೇವಾ (ಸಾಮನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16 (ಎ) (ii) ರನ್ವಯ ಶಾಶ್ವತವಾಗಿ ವಿಲೀನಗೊಳಿಸಲಾಗಿದೆ.

6. ಮೇಲೆ (9) ರಲ್ಲಿ ಓದಲಾದ ದಿನಾಂಕ 22-01-2021ರ ಅನಧಿಕೃತ ಟಿಪ್ಪಣಿಯಲ್ಲಿ ವಿವಿಧ ವೃಂದದ ಅಭಿಯಂತರರುಗಳ ಹುದ್ದೆಗಳೊಂದಿಗೆ ವಿವರವನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿ, ಸದರಿ ಅಭಿಯಂತರರುಗಳ ಸೇವಾ ವಿವರವನ್ನು ಅಂದರೆ, ನೇಮಕಾತಿ ದಿನಾಂಕ, ಜನ್ಮ ದಿನಾಂಕ, ಹುದ್ದೆ ವರ್ಗ, ಇನ್ನಿತರ

ಸೇವಾ ವಿವರಗಳನ್ನು ಲೋಕೋಪಯೋಗಿ ಇಲಾಖೆಯಿಂದಲೇ ನಿಯಮಾನುಸಾರ ಪರಿಶೀಲಿಸಿ ಅವರುಗಳ ಸೇವಾ ಜೇಷ್ಠತೆಯನ್ನು ಪವಿತ್ರ-2 ಪ್ರಕರಣದನ್ವಯ ಪ್ರಕಟಿಸಲಾದ ಅಂತಿಮ ಜೇಷ್ಠತಾ ಪಟ್ಟಿಯನ್ವಯ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳ ನಿಯಮ 6 ರ ಪರಂತುಕ (1) First Provision of Rule 6 of Karnataka Government Servants (Seniority) Rule 1977 ರನ್ವಯ ಹಾಗೂ The Karnataka Water Resources Service (Recruitment) Rules, 2014 ರನ್ವಯ ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯು ನೀಡಿರುವ ಜೇಷ್ಟತೆಗೆ ಅನುಗುಣವಾಗಿ Inter-Se Seniority ಯನ್ವಯ ಶಾಶ್ವತ ವರ್ಗಾವಣೆ ಮೂಲಕ ಅಧಿಕಾರಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಗೆ ಖಾಯಂ ಆಗಿ ಹಂಚಿಕೆ ಮಾಡುವಂತೆ ಕೋರಲಾಗಿತ್ತು.

7. ಮೇಲೆ (10) ಹಾಗೂ (11) ರಲ್ಲಿ ಓದಲಾದ ದಿನಾಂಕ 26-07-2021 ಹಾಗೂ ದಿನಾಂಕ 28-07-2021 ರ ಅಧಿಸೂಚನೆಗಳಲ್ಲಿ 1 ಅಧೀಕ್ಷಕ ಅಭಿಯಂತರರು, 1 ಕಾರ್ಯಪಾಲಕ ಅಭಿಯಂತರರು ಹಾಗೂ 6 ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) ವೃಂದದ ಅಧಿಕಾರಿಗಳ ಸೇವೆಯನ್ನು ಲೋಕೋಪಯೋಗಿ ಇಲಾಖೆಯು ಜಲ ಸಂಪನ್ಮೂಲ ಇಲಾಖೆಗೆ ಶಾಶ್ವತ ವರ್ಗಾವಣೆ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಶಾಶ್ವತವಾಗಿ ವರ್ಗಾವಣೆ ಹೊಂದಿರುವ ಸದರಿ ಅಧಿಕಾರಿಗಳನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015 (ಭಾಗ-6)</u>**
**<u>ಬೆಂಗಳೂರು ದಿನಾಂಕ: 18-09-2021</u>**

8. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ, ಲೋಕೋಪಯೋಗಿ ಇಲಾಖೆಯು ಜಲ ಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವರ್ಗಾವಣೆ ಮಾಡಿರುವ ಈ ಕೆಳಕಂಡ ಅಧಿಕಾರಿಗಳನ್ನು ಲೋಕೋಪಯೋಗಿ ಇಲಾಖೆಯು ಅಧಿಸೂಚನೆ ಸಂಖ್ಯೆ: ಲೋಇ 175 ಎಸ್ಎಸ್‌ಕೆ 2021, ದಿನಾಂಕ 26-07-2021 ಮತ್ತು ಅಧಿಸೂಚನೆ ಸಂಖ್ಯೆ ಲೋಇ 38 ಎಸ್ಎಸ್‌ಕೆ 2021, ದಿನಾಂಕ: 28-07-2021 ಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತಿಗೊಳಪಟ್ಟು ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, 2014 ರನ್ವಯ ಮಂಜೂರಾದ ಹುದ್ದೆಗಳಿಗೆ ಎದುರಾಗಿ, ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ಅಂತರ್‌ಜ್ಯೇಷ್ಠತೆಗೆ ಅನುಗುಣವಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ :

| ಕ್ರ. ಸಂ. | ಲೋಕೋಪಯೋಗಿ ಇಲಾಖೆಯ ದಿ: 19-08-2019 ಹಾಗೂ 27-08-2019ರ ಜ್ಯೇಷ್ಠತಾ ಪಟ್ಟಿಯ ಜ್ಯೇಷ್ಠತಾ ಸಂಖ್ಯೆ | ಅಧಿಕಾರಿಯ ಹೆಸರು | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವೃಂದ (ಕ.ನಾ.ಸೇ. ನಿಯಮ 32) |
|---|---|---|---|
| 1 | 3428 (ಕಾ.ಇಂ. ಜೇ.ಸಂ.) | ಶ್ರೀ ಕಿರಣ್ ಹೆಚ್. ಮಸೂತಿ | ಅಧೀಕ್ಷಕ ಅಭಿಯಂತರರು |
| 2 | 5177 (ಸ.ಕಾ.ಇಂ. ಜೇ.ಸಂ.) | ಶ್ರೀ ಹಳಿಯಾಳ ದಯಾನಂದ ಸಂಜೀವಪ್ಪ | ಕಾರ್ಯಪಾಲಕ ಅಭಿಯಂತರರು |
| 3 | 5669 (ಸ.ಕಾ.ಇಂ. ಜೇ.ಸಂ.) | ಶ್ರೀ ಮನೋಹರ ವೈಜನಾಥರಾವ ರೊಟ್ಟೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |
| 4 | 4368 (ಸ.ಇಂ. ಜೇ.ಸಂ.) | ಶ್ರೀ ಎಂ.ಆದಿಪ್ರಕಾಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |
| 5 | 4359 (ಸ.ಇಂ. ಜೇ.ಸಂ.) | ಶ್ರೀಮತಿ ಸವಿತಾ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |
| 6 | 4358 (ಸ.ಇಂ. ಜೇ.ಸಂ.) | ಶ್ರೀಮತಿ ಫಮೀದಾ ನಬಿಸಾಬ ಕಣವಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |
| 7 | 4368 (ಸ.ಇಂ. ಜೇ.ಸಂ.) | ಶ್ರೀ ರಾಮಕೃಷ್ಣ ಭಾವುಸಾಹೇಬ ಮರಾಠೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |
| 8 | 4568 (ಸ.ಇಂ. ಜೇ.ಸಂ.) | ಶ್ರೀ ಕೆ.ಮಲ್ಲಿಕಾರ್ಜುನ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಭಾಗ-1) |

<u>ಷರತ್ತುಗಳು</u>:

*i) ಮೇಲ್ಕಂಡ ಶಾಶ್ವತ ವಿಲೀನಾತಿ ಆದೇಶವು The Karnakata Water Resources Services (Recruitment) Rules, 2014 ರ ನಿಯಮ 2ಕ್ಕೆ ತಿದ್ದುಪಡಿ ತರುವ ಷರತ್ತಿಗೊಳಪಟ್ಟಿರುತ್ತದೆ.*

*ii) ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ/ವರ್ಗಾವಣೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೇಮಕಗೊಂಡಿರುವ ಅಧಿಕಾರಿ/ನೌಕರರ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ನೇಮಿಸಿಕೊಳ್ಳುವ ಬಗ್ಗೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.*

*iii) ಮೇಲ್ಕಂಡ ಆದೇಶವನ್ನು ಹೊರಡಿಸಿದ ನಂತರ, ಅನುಬಂಧದಲ್ಲಿ ಪ್ರಕಟಿಸಿರುವ ವಿವಿಧ ವೃಂದದ ಅಧಿಕಾರಿ/ನೌಕರರ ಜೇಷ್ಠತೆಯನ್ನು ಅವರುಗಳ ಅಂತರ್ ಜೇಷ್ಠತೆಯ (Inter-se) ಅನುಸಾರ ಕೂಲಂಕುಷವಾಗಿ ಪರಿಶೀಲಿಸಿ ಕರಡು ಹಾಗೂ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ಪ್ರಕಟಿಸುವುದು.*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಹೆಚ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).